ಪ್ರಾರಂಭಿಸಿ ಪಿ.ಎಸ್.ಪಿ. ಪಕ್ಷದಲ್ಲಿ ಕೆಲಸ ಮಾಡಿದ್ದ ಇವರು ದಿನಾಂಕ 18.5.1999ರಂದು ನಿಧನ ಹೊಂದಿರುತ್ತಾರೆ.

4. ಶ್ರೀ ಎಂ.ಸುಬ್ಬರಾವ್

ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದ 88 ವರ್ಷದ ಶ್ರೀ ಎಂ. ಸುಬ್ಬರಾವ್ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಬ್ರಾಹ್ಮಣ ಮಹಾ ಸಭಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ವೃತ್ತಿಯಿಂದ ಇವರು ಚನ್ನಪಟ್ಟಣ ತಾಲ್ಲೂಕಿನಲ್ಲಿ ಶ್ಯಾನುಭೋಗರಾಗಿ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ : 14-06-1999ರಂದು ಬೆಂಗಳೂರಿನಲ್ಲಿ ನಿಧನರಾಗಿರುತ್ತಾರೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳಿಸಿಕೊಡಲಾಗುವುದು.

(2) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗರ ಅಭಿವೃದ್ಧಿಗಾಗಿ ಒದಗಿಸಲಾದ ಅನುದಾನ.

238(1586)

ಶ್ರೀ ಕುಂಬ್ಳೇ ಸುಂದರರಾವ್ (ಸುರತ್ಕಲ್): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) 1997ರಿಂದ ಈವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗರ ಅಭಿವೃದ್ಧಿಗಾಗಿ ಒದಗಿಸಲಾದ ಅನುದಾನವೆಷ್ಟು? (ವರ್ಷವಾರು ವಿವರ ಒದಗಿಸುವುದು)

ಶ್ರೀ. ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು.)

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಜನಾಂಗದವರಿಗೆ 1997-98ನೇ ಸಾಲಿನಿಂದ ಒದಗಿಸಲಾದ ಅನುದಾನದ ವಿವರ ಕೆಳಕಂಡಂತಿದೆ:

(ರೂ.ಲಕ್ಷಗಳಲ್ಲಿ)

ವರ್ಷ	ರಾಜ್ಯ	ಕೇಂದ್ರ	ಒಟ್ಟು
1997-98	45.00	53.00	98.00
1998-99	5.50	30.30	35.80

ಶ್ರೀ ಕುಂಬ್ಳೆ ಸುಂದರರಾವ್: ಮಾನ್ಯ ಉಪಾಧ್ಯಕ್ಷರೆ, ಕೊರಗ ಜನಾಂಗದ ಅಭಿವೃದ್ಧಿಗೆ ಇರಿಸಿದ ಅನುದಾನದಲ್ಲಿ ಆ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರ ಮಾಡುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ನೀಡಬೇಕು. ಇಷ್ಟು ವರ್ಷಗಳು ಕಳೆದರೂ ಕೂಡ ಕೊರಗ ಸಮುದಾಯವು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದೆ. ಎಂಜಲು ಎತ್ತುವ, ಎಂಜಲು ತಿನ್ನುವ, ಅವರನ್ನು ಮುಟ್ಟಿಸಿಕೊಳ್ಳದೇ

ಇರುವಂಥ ಹಳೆಯ ಸ್ಥಿತಿ ಏನು ಇತ್ತು ಅದು ಸ್ವಾತಂತ್ರ್ಯ ಸಿಕ್ಕಿ 50 ವರ್ಷ ಕಳೆದರೂ ಕೂಡ ಬದಲಾಗಿಲ್ಲ. ಕೊರಗ ಸಮುದಾಯಕ್ಕಿಂತ ನಿಕೃಷ್ಟವಾದ ಸಮುದಾಯ ಬೇರೆ ಇದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ಅಂಥ ಸ್ಥಿತಿ ಅವರದ್ದಾಗಿದೆ. ಎಂಜಲು ತಿನ್ನುವಂಥದ್ದು, ಮುಟ್ಟಿಸಿಕೊಳ್ಳುವುದಿಲ್ಲ ಎಂದು ಹೇಳುವಂಥ ಸ್ಥಿತಿಯಲ್ಲಿ ನಾವೇನೂ ಇಲ್ಲ, ನಾವು ಮುಟ್ಟಿಸಿಕೊಳ್ಳಬೇಕಾದವರೇ ಎಂದು ಕೊರಗ ಜನಾಂಗ ಹೇಳುವಂಥ ಧಾರ್ಷ್ಟ್ಯ ತೋರಬೇಕಾದರೆ ಅವರಿಗೆ ವಿದ್ಯಾಭ್ಯಾಸ ಬೇಕಾಗುತ್ತದೆ. ಇನ್ನು ಹಿಂದುಳಿದವರ್ಗದವರಾದ ಅದರಲ್ಲೂ ಕೊರಗ ಸಮುದಾಯದ ಹಾಸ್ಟಲುಗಳಿಗೆ ವಾರ್ಡನ್‌ಗಳು ಇಲ್ಲ, ಅಧ್ಯಾಪಕರುಗಳು ಇಲ್ಲ, ಮಕ್ಕಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆ ಆಗುತ್ತಾ ಇದೆ. ಮಕ್ಕಳು ಶಾಲೆಗೆ ಬರುವಂಥ ಆಕರ್ಷಣೆ ಇಲ್ಲ. ಇದಕ್ಕೆಲ್ಲಾ ಪರಿಹಾರ ಸರ್ಕಾರದಿಂದ ಏನು ಮಾಡುತ್ತೀರಿ? ಒದಗಿಸಿದ ಅನುದಾನ ಕಳೆದ ವರ್ಷಕ್ಕಿಂತ ಈ ವರ್ಷ ಕಡಿಮೆ ಆಗಿದೆ. 98ಲಕ್ಷ ರೂಪಾಯಿಗಳನ್ನು ಕಳೆದ ವರ್ಷ ಒದಗಿಸಿದರೆ ಈ ವರ್ಷ ಕೇವಲ 35ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇಷ್ಟು ಕಡಿಮೆ ಆಗುವುದಕ್ಕೆ ಕಾರಣವೇನು? ಅನುದಾನ ಕಡಿಮೆ ಮಾಡಿರುವುದು ಆ ಸಮುದಾಯದ ಉದ್ಧಾರ ಆಯಿತೆಂದು ಅರ್ಥವೇ? ಅಥವಾ ಕಡಿಮೆ ಆಗುವುದಕ್ಕೆ ಮತ್ತೆ ಏನಾದರೂ ವ್ಯವಸ್ಥೆ ಇವರಿಗಾಗಿ ಮಾಡಿದ್ದೀರಾ? ಇದರ ಬಗ್ಗೆ ವಿವರಣೆ ಬೇಕು.

ಶ್ರೀ ಕೆ.ಎಂ ಕೃಷ್ಣಾ ರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಈ ಕೊರಗ ಜನಾಂಗ ಅತ್ಯಂತ ಹಿಂದುಳಿದಿರತಕ್ಕಂಥ ಒಂದು ಸಮುದಾಯವಾಗಿದೆ. ಇವರ ಬಗ್ಗೆ ಮಾನ್ಯ ಸದಸ್ಯರಿಗೆ ಇರುವ ಕಳಕಳಿಯನ್ನು ಸರ್ಕಾರ ಅರ್ಥಮಾಡಿಕೊಳ್ಳುತ್ತದೆ. ಹಿಂದೆ ಎಂಜಲು ಎತ್ತತಕ್ಕಂಥದ್ದು, ಮುಟ್ಟಿಸಿಕೊಳ್ಳದೇ ಇರತಕ್ಕಂಥದ್ದು ನಡೆಯುತ್ತಿತ್ತು. ಈಗ ಶೈಕ್ಷಣಿಕವಾಗಿ ಅವರು ಬೆಳೆದಂತೆ ಜನರಲ್ಲಿ ಒಂದು ಪ್ರಗತಿಪರವಾದ ಮನೋಭಾವನೆ ಬರುತ್ತಾ ಬರುತ್ತಾ ಅದು ಹೋಗುತ್ತದೆ. ನಾವು ಒಂದೇ ಸಲಕ್ಕೆ, ತಕ್ಷಣವೇ ಆ ಪದ್ಧತಿಯನ್ನು ನಿಲ್ಲಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ ಅಥವಾ ಒಂದೇ ಒಂದು ಕಾನೂನಿನಡಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ ಶೈಕ್ಷಣಿಕವಾಗಿ ಎಲ್ಲರೂ ಕೂಡ ವಿದ್ಯಾವಂತರಾಗಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ ಆಶ್ರಮ ಶಾಲೆಗಳನ್ನು ತೆರೆದಿದ್ದೇವೆ. ಅಲ್ಲಿಗೆ ಉಪಾಧ್ಯಾಯರ ನೇಮಕ ಆಗದೇ ಇರುವುದು, ಹಾಸ್ಟಲುಗಳು ಸರಿಯಾಗಿ ನಡೆಯುತ್ತಿಲ್ಲ ಎನ್ನತಕ್ಕಂಥ ಲೋಪದೋಷಗಳು ಇದ್ದು ಅದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಇದಕ್ಕೆಲ್ಲಾ ಮುಖ್ಯವಾಗಿ ಮಾನ್ಯ ಸದಸ್ಯರ ಅನಿಸಿಕೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿದೆ. ಈ ಸಮುದಾಯದವರು ಆರ್ಥಿಕವಾಗಿ ಮುಂದೆ ಬರಬೇಕಾದರೆ ಅಲ್ಲಿರತಕ್ಕಂಥ ಜಮೀನಿಗೆ ಕೊಳವೆ ಬಾವಿ ಹಾಕತಕ್ಕಂಥ ಯೋಜನೆಯನ್ನು ಸರ್ಕಾರ ಈಗ ಹಾಕಿಕೊಂಡಿದೆ. ಸುಮಾರು ಆಟೋರಿಕ್ಷಾಗಳನ್ನು ಕೊರಗ ಸಮಾಜಕ್ಕೆ ಕೊಟ್ಟಿದ್ದೇವೆ. ಹಿಂದಿನ ವರ್ಷಕ್ಕೂ ಈ ವರ್ಷಕ್ಕೂ ಅನುದಾನದಲ್ಲಿ ಕಮ್ಮಿ ಆಗಿದೆ ಎಂದು ಹೇಳಿದರು. ಇದು ಅಲ್ಲಿರತಕ್ಕಂಥ ಜಿಲ್ಲಾಮಟ್ಟದಲ್ಲಿ ಅವರು ಆಯವ್ಯಯವನ್ನು ಕಡಿಮೆ ಮಾಡಿರುವುದರಿಂದ ಅದು ಕಡಿಮೆ ಆಗಿದೆ. ಈಗ ಸುಮಾರು ನಾಲ್ಕು ಕೋಟಿ ರೂಪಾಯಿಗಳನ್ನು ಹಿಂದುಳಿದ ವರ್ಗಕ್ಕೆ ಖರ್ಚು ಮಾಡತಕ್ಕಂಥ ಒಂದು ಯೋಜನೆಯನ್ನು ಮಾಡುತ್ತಿದ್ದೇವೆ. ಕೊರಗ ಸಮಾಜದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರತಕ್ಕಂಥವರನ್ನು ಮುಂದೆ ತರತಕ್ಕಂಥ ಮುಖ್ಯ ಉದ್ದೇಶ ಖಂಡಿತವಾಗಿ ಸರ್ಕಾರಕ್ಕೆ ಇದೆ.

ಶ್ರೀ ಕುಂಬೈ ಸುಂದರರಾವ್ : ಮಾನ್ಯ ಉಪಾಧ್ಯಕ್ಷರೆ, ಕೊರಗ ಜನಾಂಗದವರು ವಿದ್ಯಾವಂತರಾಗಬೇಕು ಎನ್ನುವಂಥ ಪ್ರಾಮಾಣಿಕ ಭಾವನೆಯನ್ನು ಮಾಡಿದ್ದು ಹೌದಾದರೆ ಅಲ್ಲಿ ಅಧ್ಯಾಪಕರ ಕೊರತೆಯನ್ನು

ನೀಗಿಸಲು ನೇಮಕ ಮಾಡಬೇಕು. ಇಲ್ಲದಿದ್ದರೆ ಗುತ್ತಿಗೆ ಆಧಾರದ ಮೇಲೆ ಅಧ್ಯಾಪಕರನ್ನು ತುಂಬಬೇಕು. ಖಾಲಿ ಇರುವ ಉಪಾಧ್ಯಾಯರ ಸ್ಥಾನವನ್ನು ಭರ್ತಿಮಾಡಿದಾಗ ಆ ವಿದ್ಯಾರ್ಥಿಗಳಿಗೆ ವಿದ್ಯೆ ಸಿಗುವುದಕ್ಕೆ ಸಾಧ್ಯ. ಒಂದು ಶಾಲೆಯಲ್ಲಿ ಒಳ್ಳೆಯ ಸೌಕರ್ಯವಿದೆ, ಭವಿಷ್ಯ ಒಳ್ಳೆಯದಾಗುವುದಕ್ಕೆ ಸಾಧ್ಯ ಎನ್ನುವಂಥ ಭಾವನೆ ಬಂದಾಗ ಮಾತ್ರ ವಿದ್ಯಾರ್ಥಿಗಳ ತಂದೆತಾಯಿಗಳು ಆ ಶಾಲೆಗೆ ಕಳುಹಿಸುತ್ತಾರೆ. ಇಲ್ಲದಿದ್ದರೆ ಕಳುಹಿಸುವುದಿಲ್ಲ. ಆ ರೀತಿ ಭಾವನೆ ಬರುವುದಕ್ಕೆ ಸರ್ಕಾರದಿಂದ ಏನು ಮಾಡುತ್ತೀರಿ? ಇದರ ಜೊತೆಗೆ ನನಗೆ ಸಿಕ್ಕಿದ ಅಂಕಿಅಂಶಗಳ ಪ್ರಕಾರ ಕಳೆದ ಆರು ವರ್ಷಗಳಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ಕೇಂದ್ರದಿಂದ ರಾಜ್ಯಸರ್ಕಾರಕ್ಕೆ ಕೊರಗ ಸಮುದಾಯದ ಅಭಿವೃದ್ಧಿಗಾಗಿ ಕೊಟ್ಟಿದೆ. ಆ ಹಣದ ಖರ್ಚು ಈ ಸಮುದಾಯದವರಿಗಾಗಿ ಆಗಿಲ್ಲ. ಆ ಹಣ ಖರ್ಚು ಆಗದೆ ಉಳಿಯುವುದಕ್ಕೆ ಕಾರಣವೇನು? ಇದಕ್ಕೆ ದಯವಿಟ್ಟು ವಿವರಣೆ ಕೊಡಬೇಕು.

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ವಿಶ್ವವಿದ್ಯಾನಿಲಯದ ಪ್ರಕಾರ, 'ಪೀರ್ ಸಮಿತಿ' ವರದಿ ಜಾರಿಗೆ ಬಂದಿದೆ. ಈ ವರದಿಯ ಜಾರಿಯ ಬಗ್ಗೆ ಸರ್ಕಾರ ಏನು ನಿರ್ಣಯ ತೆಗೆದುಕೊಂಡಿದೆ? ಅವರಿಗೆ ಕೊಡುವ ಸವಲತ್ತುಗಳು, ಮನೆ ನಿವೇಶನಗಳು ಅಥವಾ ಅವರಿಗೆ ಶಿಕ್ಷಣ ಕೊಡುವ ವಿಚಾರದಲ್ಲಿ 'ಪೀರ್‌ಸಮಿತಿ' ವರದಿ ಪ್ರಕಾರ ಆಗುತ್ತಿಲ್ಲ. ಸರ್ಕಾರಕ್ಕೆ ಪೂರ್ಣವಾದ ವರದಿಯನ್ನು ಕೊಟ್ಟಿದ್ದಾರೆ. ಇನ್ನೂ ಕೂಡ ಸರ್ಕಾರ ಅದನ್ನು ಕಾರ್ಯಗತಗೊಳಿಸಿಲ್ಲ. ಅದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಕೊರಗ ಸಮಾಜದ ಎಲ್ಲರನ್ನು ಶೈಕ್ಷಣಿಕವಾಗಿ ವಿದ್ಯಾವಂತರನ್ನಾಗಿ ಮಾಡಬೇಕೆಂದು ಸರ್ಕಾರದ ಒಂದು ಮುಖ್ಯ ಗುರಿಯಾಗಿದೆ. ಅಲ್ಲಿ ಹಾಸ್ಟಲ್‌ಗೆ ಕಟ್ಟಡದ ನಿರ್ಮಾಣ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಈಗ ಹೆಚ್ಚಿನ ಹಾಸ್ಟಲ್‌ಗಳ ನಿರ್ಮಾಣಕ್ಕೆ ಸರ್ಕಾರ ಆದ್ಯತೆ ಕೊಟ್ಟಿದೆ. ಉಪಾಧ್ಯಾಯರ ನೇಮಕಾತಿಯನ್ನು ಕೂಡ ಮಾಡಲು ಸರ್ಕಾರ ಸೂಕ್ತವಾದ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದೆ. ಶಿಕ್ಷಕರು ಇಲ್ಲದಿರುವ ಕಡೆ ಗೌರವಾನ್ವಿತ ಶಿಕ್ಷಕರನ್ನು ನೇಮಕ ಮಾಡುವುದು ಸರಿಯಾದ ಕ್ರಮವಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆ. ನೇರವಾಗಿ ಶಿಕ್ಷಕರನ್ನು ನೇಮಕ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆ. ಇನ್ನು ಸಮಿತಿಯ ವರದಿಯ ಆಧಾರದ ಮೇಲೆ ಶೈಕ್ಷಣಿಕವಾಗಿ ಆರ್ಥಿಕವಾಗಿ ಅವರು ತನ್ನ ಕಾಲಮೇಲೆ ನಿಲ್ಲತಕ್ಕಂಥ ಕೆಲವು ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳುತ್ತಿದೆ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನು ಇರತಕ್ಕಂಥ ಕಡೆ, ಗಂಗಾಕಲ್ಯಾಣ ಯೋಜನೆಯಲ್ಲಿ ಯೋಜನಬದ್ಧ ಕಾರ್ಯಕ್ರಮವನ್ನು ಹಾಕಿಕೊಂಡು ಕೊಳವೆಬಾವಿ ಇಟ್ಟುಕೊಂಡು ನೀರು ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ಎಲ್ಲಾ ಹಾಸ್ಟಲ್‌ಗಳ ಕಟ್ಟಡಗಳ ನಿರ್ಮಾಣ ಮಾಡಿ ವಸತಿಶಾಲೆಗಳಲ್ಲಿ ಅಲ್ಲಿಯೇ ಶಿಕ್ಷಕರು ಇರತಕ್ಕಂಥ ಒಂದು ವ್ಯವಸ್ಥೆಯನ್ನು ಕೂಡ ಸರ್ಕಾರದ ಕಾರ್ಯಕ್ರಮದಲ್ಲಿ ಹಾಕಿಕೊಂಡಿದ್ದೇವೆ.

ಶ್ರೀ ಕೆ. ಜಯರಾಮಶೆಟ್ಟಿ: ಸಮಾಜ ಕಲ್ಯಾಣ ಇಲಾಖೆ ದಕ್ಷಿಣ ಕನ್ನಡದಲ್ಲಿ ಕಿರು ನೀರು ಸರಬರಾಜು ಯೋಜನೆಯನ್ನು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಮಾಡಲಿಕ್ಕೆ ಬರುವುದಿಲ್ಲವೆಂದು ಹಿಂದೆ ತಾವೇ ಹೇಳಿದ್ದೀರಿ, ಈಗ ಅದನ್ನೇ ಹೇಳುತ್ತಿದ್ದೀರಿ. ಎರಡು ವಿಧವಾದ ಉತ್ತರ ಕೊಡುತ್ತಿದ್ದೀರಿ.

ಉಪಾಧ್ಯಕ್ಷರು:- ಡಿಬೇಟ್ ಬೇಡ.

ಶ್ರೀ ಡಿ.ವಿ. ಸದಾನಂದಗೌಡ:- (ಪುತ್ತೂರು) ಮೂಲತ: ಕೊರಗ ಜನಾಂಗದವರು ಅಲೆಮಾರಿ ಸ್ವಭಾವದವರು. ಅವರು ಒಂದು ಕಡೆ ಉಳಿಯುವುದಿಲ್ಲ. ಬುಟ್ಟಿ ಹೆಣೆಯುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಇವರನ್ನು ಒಂದೇ ಕಡೆ ಯಾವುದಾದರೂ ಕಾಲೋನಿಗಳನ್ನು ಮಾಡಿ ಅವರಿಗೆ ವ್ಯವಸ್ಥೆಯನ್ನು ಮಾಡುವ ಯೋಜನೆಯೇನಾದರೂ ಸರ್ಕಾರ ಮಾಡಿದೆಯೇ? ಅವರ ಅಲೆಮಾರಿ ಜೀವನವನ್ನು ನಿಲ್ಲಿಸುವ ಯೋಜನೆ ಸರ್ಕಾರಕ್ಕೇನಾದರೂ ಇದೆಯೇ? ಏಕೆಂದರೆ, ನೀವು ಅವರಿಗೆ ರಿಕ್ಷಾ ಕೊಟ್ಟರೆ, ವಿದ್ಯೆ ಕೊಟ್ಟರೆ ಅವರಲ್ಲಿ ಉಳಿಯುವುದಿಲ್ಲ.

ಶ್ರೀ ಕುಂಬ್ಳೆ ಸುಂದರರಾವ್: ನಾನು ಕೇಂದ್ರದಿಂದ ಬಂದ ನಾಲ್ಕು ಕೋಟಿ ರೂಪಾಯಿಗಳ ಅನುದಾನ ಉಪಯೋಗವಾಗಿಲ್ಲವೆಂದು ಕೇಳಿದ್ದಕ್ಕೆ ಸಚಿವರು ಇನ್ನೂ ಉತ್ತರ ಕೊಟ್ಟಿಲ್ಲ. ನನಗೆ ಸಿಕ್ಕಿರುವ ಮಾಹಿತಿ ತಪ್ಪು ಎಂದಾಗಬೇಕು ಇಲ್ಲ ನಾಲ್ಕು ಕೋಟಿ ರೂಪಾಯಿಗಳನ್ನು ಕೊರಗ ಸಮುದಾಯಕ್ಕೆ ಬಳಸದೆ ಮತ್ತಾವುದೋ ಉದ್ದೇಶಕ್ಕೆ ಬಳಸಿದ್ದೀರಿ ಎಂದಾಗಬೇಕು. ಯಾವುದು ಸತ್ಯ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಅಲೆಮಾರಿ ಜನಾಂಗವಾದರೂ ಕೂಡ ಅಲ್ಲಿ ಅಲ್ಪಸ್ವಲ್ಪ ಜಮೀನನ್ನು ಅವರು ಇಟ್ಟುಕೊಂಡಿದ್ದಾರೆ. ಅಲೆಮಾರಿ ಜನಾಂಗ ಕೂಡ ಅಲ್ಲಿ ವಾಸಮಾಡುವ ವಿಧಾನವನ್ನು ಕಲಿತಿದ್ದಾರೆ. ಓಪನ್ ವೆಲ್‌ಗಳನ್ನು ಕೊರೆಯುವ ಕಾರ್ಯಕ್ರಮವಿದೆ. ಕೇಂದ್ರದವರು ಅನುದಾನ ಕೊಟ್ಟಿದ್ದು, ಗೈಡ್‌ಲೈನ್ಸ್ ಕೊಟ್ಟಿಲ್ಲ. ಅದನ್ನು ಸರ್ಕಾರ ಪಡೆಯುತ್ತಿದೆ. ಅದರ ಆಧಾರದ ಮೇಲೆ ಪ್ರಾಮಾಣಿಕವಾಗಿ ಅವರು ಅವರ ಕಾಲ ಮೇಲೆ ನಿಲ್ಲುವ ಹಾಗೆ ಯೋಜನಾ ಬದ್ಧ ಯೋಜನೆಯನ್ನು ಸರ್ಕಾರ ಹಾಕಿಕೊಳ್ಳುತ್ತಿದೆ.

ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ

240 (1638)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) ರಾಜ್ಯದಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಒಂದೊಂದು ಅಂಬೇಡ್ಕರ್ ಭವನ ನಿರ್ಮಿಸಲು ಸರ್ಕಾರ ಒಪ್ಪಿಕೊಂಡಿರುವುದು ನಿಜವೇ?

(ಆ) ಹಾಗಿದ್ದಲ್ಲಿ ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಅಂಬೇಡ್ಕರ್ ಭವನ ಎಂದು ನಿರ್ಮಾಣ ಮಾಡಲಾಗುವುದು, ಹಾಗೂ ಇದಕ್ಕಾಗಿ ಒದಗಿಸಲಾದ ಅನುದಾನ ಎಷ್ಟು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

(ಅ) ಹೌದು.

(ಆ) ಸರ್ಕಾರಿ ಆದೇಶ ಸಂಖ್ಯೆ. ಸಕಇ 51 ಪಕವಿ 94 ದಿನಾಂಕ 26-9-94ರಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಮಿನಿ ಅಂಬೇಡ್ಕರ್ ಭವನಗಳನ್ನು ನಿರ್ಮಿಸಲು ಆದೇಶಿಸಿದೆ. ಅದರಂತೆ ಇದುವರೆವಿಗೂ 167 ಸ್ಥಳಗಳಲ್ಲಿ ಮಿನಿ ಅಂಬೇಡ್ಕರ್ ಭವನಗಳ ನಿರ್ಮಾಣಕ್ಕಾಗಿ ಸರ್ಕಾರ ಮುಂಜೂರಾತಿ ನೀಡಿದೆ. ಆದರೆ, ಈ 167 ಸ್ಥಳಗಳಲ್ಲಿ ಉಳ್ಳಾಲ ವಿಧಾನ ಸಭಾ ಕ್ಷೇತ್ರವು ಸೇರಿರುವುದಿಲ್ಲ. ಬಾಕಿ ಉಳಿದಿರುವ ವಿಧಾನಸಭಾ ಕ್ಷೇತ್ರಗಳಲ್ಲಿ (ಉಳ್ಳಾಲ ವಿಧಾನಸಭಾ ಕ್ಷೇತ್ರವೂ ಸೇರಿದಂತೆ) ಮಿನಿ